ಅಪ್ಪ, ಅಮ್ಮ ಅಷ್ಟೊಂದು ಮಾತಾಡಿದರಲ್ಲ, ಇವಳು ತುಟಿ ಬಿಚ್ಚಿದಳೇ? ಅಂದರೆ ಅವರು ಹೇಳಿದ್ದಕ್ಕೆಲ್ಲಾ ತನ್ನ ಸಮ್ಮತಿ ಅನ್ನುವ ಅರ್ಥವಲ್ಲದೆ ಮತ್ತೇನು? ಎಲ್ಲಾ ಪೂರ್ವಯೋಜಿತ ಅನ್ನುವ ಅನಿಸಿಕೆ ಮತ್ತೊಮ್ಮೆ ಜಾಗೃತಗೊಂಡು ರಾಮಚಂದ್ರನ ಹುಬ್ಬು ಗಂಟಿಕ್ಕಿತು.

'ಬರ್ಬೇಕಂತೆ, ಅಮ್ಮ ಕರೀತಿದಾಳೆ..' ಒಳಗಿನಿಂದ ಮಗಳು ಬಂದು ಪಂಚೆ ಹಿಡಿದೆಳೆದಳು.

'ಬರ್ತೀನಿ, ತಡಿ..' ಅಂದನೇ ಹೊರತು ಮಡದಿಯ ಕರೆಗೆ ಸ್ಪಂದಿಸಿ ರಾಮಚಂದ್ರ ಅವಳಿದ್ದಲ್ಲಿಗೆ ಹೋಗಲಿಲ್ಲ. ತನಗೂ ಉಂಟು ಸ್ವಾಭಿಮಾನ. ತನಗೂ ಉಂಟು ಮನೆಮಠ. ತನಗೂ ಇದ್ದಾಳೆ ಒಬ್ಬ ಅಸಹಾಯ ಅಮ್ಮ. ಎಲ್ಲಾ ಇರುವುದು ನಾಗಶ್ರೀಗೆ ಮಾತ್ರವಾ? ತಾನೇನು ಕಮ್ಮಿ? ಅವಳೇನು ಹೆಚ್ಚು?

ರಾತ್ರಿ ಹೆಳೆಗೆ ಒಂದು ತುತ್ತು ಉಂಡ ಶಾಸ್ತ್ರಮಾಡಿ ಮಲಗಲು ಉಪ್ಪರಿಗೆ ಹತ್ತಿದ ರಾಮಚಂದ್ರನಿಗೆ ಕಣ್ಮುಚ್ಚಿ ನಿದ್ದೆ ಬರಲಿಲ್ಲ. ದೂರ ನಿಂತು ಸತಾಯಿಸುತ್ತಿದ್ದಾಳೆ ನಿದ್ರಾಂಗನೆ. ತನ್ನ ಬದುಕಿನಲ್ಲಿ ಇಂತಾ ಪ್ರಸಂಗ ಎದುರಿಸಬೇಕಾಗಿ ಬರಬಹುದೆಂದು ಕನಸಲ್ಲೂ ಎಣಿಸಿರಲಿಲ್ಲ. ಯಾರೋ ಆಡಿಸುವ ಸೂತ್ರದ ಗೊಂಬೆಯಾಗಬೇಕಾದ ಪರಿಸ್ಥಿತಿ ನಿರೀಕ್ಷಿಸಿರಲಿಲ್ಲ. ಆಚೀಚೆ ಹೊಗಚಾಡುತ್ತಾ ತನ್ನ ನಿಟ್ಟುಸಿರ ಧಗೆಯಲ್ಲಿ ತಾನೇ ಬೆಂದು ಹೋಗುತ್ತಿದ್ದ ಸಂದರ್ಭದಲ್ಲಿ ಕೈ ಬಳೆಗಳ ಕಿಂಕಿಣಿ ಸನಿಹದಿಂದ ಕೇಳಿ ಬಂತು. ನಾಗಶ್ರೀ? ಅವನು ಹೊದ್ದಿದ್ದ ಹೊದಿಕೆ ಎಳೆದು ಅವನ ಮಗ್ಗುಲಲ್ಲಿ ಸೇರಿಕೊಂಡು ಅವನನ್ನು ಬಿಗಿದಪ್ಪಿದಳು ನಾಗಶ್ರೀ. ಭಾರವಾದ ಅವಳ ಉಸಿರು ಅವನ ಎದೆಗೆ ಕಚಕುಳಿ ಇಕ್ಕುತ್ತಾ,

'ಬಾಣಂತನಾನೇ ಮುಗಿದಿಲ್ಲ ನಿಂದು. ಇಲ್ಲ್ಯಾಕೆ ಬಂದೆ?' ಒರಟಾಗಿ ಕೇಳಿದ ರಾಮಚಂದ್ರ.

'ಚಾಳಿಸ್ತಿ ದೀರೇನ್ರೀ? ಇಂತಾ ಮಾತಾಡ್ತಿರೋದು ನೀವಾ?'

ಹೆಣ್ಣೆಂಬ ಮಾಯೆಯನ್ನು ಛೂ ಬಿಟ್ಟು ಪುರುಷನನ್ನು ಹೊಂಡಕ್ಕೆ ಬೀಳಿಸುವ ಹುನ್ನಾರವೇ? ಈ ಬಾಣ ಯಾವತ್ತೂ ಗುರಿ ತಪ್ಪದೆಂಬ ಪ್ರಬಲ ನಂಬಿಕೆಯೇ? ಇದು ತನ್ನ ಸತ್ವಪರೀಕ್ಷೆ. ಸೋಲು, ಗೆಲುವಿನ ಅಗ್ನಿಪರೀಕ್ಷೆ. ಯಾವುದು ನಿನ್ನ ಆಯ್ಕೆ? ಸ್ವಾಭಿಮಾನದ, ಆತ್ಮವಿಶ್ವಾಸದ, ಸ್ವಾತಂತ್ರ್ಯದ ಬದುಕೇ ಅಥವಾ ತನ್ನತನವನ್ನು ಅಡವಿಟ್ಟು ಬೇರೊಬ್ಬರ ತಾಳಕ್ಕೆ ಕುಣಿಯುವ ಗೊಂಬೆಯಾಗುವಂತಾದ್ದೇ? ಅಮ್ಮ ಮೊದಲೇ ಹೀಗಾಗಬಹುದೆಂಬ ಸುಳು ಕೊಟ್ಟಿದ್ದಳು. ಎಷ್ಟಾದರೂ ಅನುಭವಸ್ಥೆ. ಭಾರೀ ದೊಡ್ಡಮನುಷ್ಯನಂತೆ ತಾನು ಅವಳಿಗೆ ಹೀಗಾಗದು ಎಂದು ಆಶ್ವಾಸನೆ ಕೊಡಲಿಲ್ಲವೇ? ರಾಮಚಂದ್ರ ತನ್ನನ್ನು ಬಳಸಿದ್ದ ಮಡದಿಯ ಕೈಗಳ ಬಿಗಿಯನ್ನು ಸಡಿಲಿಸಿದ.

'ಸೆಕೆ ಕಣೇ, ತಡೆಯೋಕಾಗ್ದಿದ್ದಷ್ಟು ಸೆಕೆಯಾಗ್ತಿದೆ..' ಅಂದ. ಪರೋಕ್ಷವಾಗಿ ಹೇಳಿದ್ದಾದರೂ ಅರ್ಥ ಮಾಡಿಕೊಂಡಳು ನಾಗಶ್ರೀ. ಸ್ವಾಭಿಮಾನಕ್ಕೆ ಘಾಸಿಯಾದವಳಂತೆ ಅಲ್ಲಿಂದೆದ್ದು ಹೊರಟು ಹೋದಳು. ತಾನು ನಡೆದುಕೊಂಡ ರೀತಿ ಸರಿಯಾಯ್ತಾ? ತಪ್ಪಾಯ್ತಾ? ತಪ್ಪಾಯ್ತಾ? ಸರಿಯಾಯ್ತಾ?


ಬೆಳಿಗ್ಗೆ ನಾಗಶ್ರೀ ಎದ್ದೇಳುವುದರೊಳಗೆ ರಾಮಚಂದ್ರ ಆ ಮನೆಯಿಂದ ಹೊರಟುಬಿಟ್ಟಿದ್ದ.

'ನಿನ್ನತ್ತೆ ಕೊಟ್ಟಿಗೆಗೆ ಹಾಲು ಕರೆಯೋಕೆ ಹೋಗಿದಾಳೆ. ಬರೀ ಹೊಟ್ಟೇಲಿ ಯಾಕೆ ಹೋಗ್ತಿ? ತಡಿ, ಒಂದ್ಲೋಟ ಕಾಫೀನಾರೂ ಕುಡ್ಕಂಡು ಹೋಗು..' ಕವಲು ಕವಲಾದ ಉದ್ದದ ಬರಲಿನಿಂದ ಅಂಗಳ ಗುಡಿಸುತ್ತಿದ್ದ ಶೀನಪ್ಪಯ್ಯ ಅಳಿಯನನ್ನು ತಡೆಯಲು ನೋಡಿದ್ದರು.

'ಬಸ್ಸಿಗೆ ಹೊತ್ತಾಗುತ್ತೆ..' ಎನ್ನುತ್ತಾ ಮರುಮಾತಿಗೆ ಆಸ್ಪದ ಕೊಡದೆ, ತಿರುಗಿ ನೋಡದೆ, ಉಣುಗೋಲು ತೆಗೆದು, ಗಾಡಿರಸ್ತೆಗೆ ಕಾಲಿಟ್ಟು..

ರಾಮಚಂದ್ರ ಕಾಫಿ ಕುಡಿದು ಮುಗಿಸಿದ ಲೋಟವನ್ನು ಅಲ್ಲೇ ಮಂಚದ ಕೆಳಗೆ ದೂಡಿ ಎರಡೂ ಅಂಗೈಗಳನ್ನು ತಲೆಕೆಳಗಿಟ್ಟುಕೊಂಡು ಮಂಚದ ಮೇಲೆ ಉದ್ದಕ್ಕೆ ಕಾಲು ನೀಡಿ ಮಲಗಿದ. ಹಟ ಸಾಧಿಸುವುದು ಎಂಬುದು ಅವನ ಜಾಯಮಾನವಲ್ಲ. ಆದರೆ ಹಾಗೆ ನಡೆದುಕೊಳ್ಳಬೇಕಾದಂತಾ ಪರಿಸ್ಥಿತಿಯನ್ನು ತಂದಿಟ್ಟಿತ್ತು ಕಾಲ. ಕಾಲ ಅನ್ನುವುದಕ್ಕಿಂತಾ ಮನುಷ್ಯರ ವರ್ತನೆ.

* * *



## ಇಲ್ಲಿಯವರೆಗೆ

ರಾಮಚಂದ್ರ ಅತ್ತೆ ಮನೆಗೆ ಹೋಗುತ್ತಾನೆ. ಹಸಿ ಬಾಣಂತಿ ಕೋಣೆಗೆ ಹೋಗಿ ಬಹಳ ದಿನಗಳ ಬಳಿಕ ಪತ್ನಿಯನ್ನು ನೋಡುತ್ತಾನೆ. ಅತ್ತೆ ಕಾಫಿ ತಂದು ಕೊಡುತ್ತಾರೆ. ಸ್ವಲ್ಪ ಹೊತ್ತಿನ ಬಳಿಕ ನಾಗಶ್ರೀಯ ಸೀರೆಯ ಮರೆಯಲ್ಲಿದ್ದ ತನ್ನ ಕಂದನನ್ನು ನೋಡುತ್ತಾನೆ. ಮಗು ಕಣ್ಣರಳಿಸಿ ನಗುತ್ತದೆ. ಎರಡೇ ತಿಂಗಳಲ್ಲಿ ಮಗ ಎಷ್ಟು ದೊಡ್ಡವನಾದ ಎಂದು ಸಂಭ್ರಮಿಸುತ್ತಾನೆ ರಾಮಚಂದ್ರ. ರಘುರಾಮ ಕಾಲವಾದ ಮೇಲೆ ಭವಾನಿಗೆ ಪಾಲುಕೊಟ್ಟು ಕಳಿಸಿದ ವಿಚಾರದ ಕುರಿತು ಪತಿ–ಪತ್ನಿ ಪ್ರಸ್ತಾಪ ಮಾಡುತ್ತಾರೆ. ಅಣ್ಣನ ಅಕಾಲಿಕ ಸಾವು ತನ್ನ ಪತ್ನಿಯನ್ನು ಅಷ್ಟಾಗಿ ಕಾಡಲಿಲ್ಲ ಎಂಬ ಕಟುಸತ್ಯವನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡ ರಾಮಚಂದ್ರ.
ಉಪ್ಪರಿಗೆ ಮೇಲೆ ಹಾಸಿದ ಹಾಸಿಗೆ ಮೇಲೆ ಮಲಗಿದ ರಾಮಚಂದ್ರನಿಗೆ ಸ್ವಲ್ಪವೂ ನಿದ್ದೆ ಬರದೆ ತೊಳಲಾಡಿದ.

### ರಾಧಮ್ಮನ ಅನುಮಾನ

ಮಳೆಗಾಲ ಮುಗಿದು, ಕೊನೆ ಮುಹೂರ್ತ ನಡೆದು, ಅಡಿಕೆ ಕುಯ್ಲಿನ ಭರಾಟೆ ಶುರುವಾದರೂ ಮಗ ಮನೆ ಬಿಟ್ಟು ಅಲುಗದೆ ಕತ್ತೆಕೆಲಸ ಮಾಡುತ್ತಾ ಮನೆಗೆ ಅಂಟಿಕೊಂಡಿರುವುದನ್ನು ನೋಡಿದರೆ ಯಾವ ತಾಯಿಗೆ ಬರುವುದಿಲ್ಲ ಅನುಮಾನ? ಯಾವತ್ತೋ ಇಂತಾದ್ದೊಂದು ಸಂದೇಹಕ್ಕೆ ಪಕ್ಕಾಗಿದ್ದರು ರಾಧಮ್ಮ. ಚೊಚ್ಚಲು ಬಾಣಂತನದಲ್ಲಾದಂತೆ ಏಳು ತಿಂಗಳು ಮುಗಿಯುವಷ್ಟರಲ್ಲಿ ಸೊಸೆ ಮೊಮ್ಮಗನೊಡನೆ ಬರುತ್ತಾಳೆ ಎಂದು ಹಾರೈಸಿಕೊಂಡಿದ್ದರೆ ಏಳಲ್ಲ, ಎಂಟಾದರೂ ಸೊಸೆ ಬರುವ ಸೂಚನೆ ಇಲ್ಲ. ಆವತ್ತು ತಮ್ಮ ಬಲವಂತಕ್ಕೆ ಮಾವನ ಮನೆಗೆ ಹೋಗಿ ಬಂದಿದ್ದ ಮಗ ಮತ್ತೆ ಆ ಕಡೆ ತಲೆ ಹಾಕಿ ಮಲಗಿಲ್ಲ. ಫೋನೂ ಮಾಡಿದ ಹಾಗೆ ಕಾಣುತ್ತಿಲ್ಲ. ಅತ್ತಲಿಂದಲೂ ಇಲ್ಲ, ಇತ್ತಲಿಂದಲೂ ಇಲ್ಲ.

'ಯಾಕೋ? ಏನಾಯ್ತೋ? ಜಗಳ ಗಿಗಳ ಮಾಡ್ಕಂಡು ಬಂದಿದೀಯನೋ?' ಕೇಳಿದ್ದಳು ಅಮ್ಮ.

'ನಂಗೆ ಯಾವಾಗ್ಲೂ ನಾಲಿಗೆ ತುರಿಸ್ತಿರುತ್ತೆ ನೋಡು. ಜಗಳ ಮಾಡ್ದಿದ್ರೆ ತಿಂದಿದ್ದು ಅರಗುತ್ತಾ?' ಕೇಳಿದ್ದ ರಾಮಚಂದ್ರ.

'ನೀನು ಬಾಯ್ಬಿಟ್ಟು ಹೇಳೀ ಎಲ್ಲಾ ಗೊತ್ತಾಗ್ಬೇಕಾ ನಂಗೆ? ಏನೋ ನಡೀಬಾರದ್ದು ನಡೆದಿದೆ. ಈ ಅಮ್ಮಂಗೆ ಹೇಳೋಣ ಅನ್ಸಿದ್ರೆ ಹೇಳು. ಬ್ಯಾಡಾಂತ ಕಂಡ್ರೆ ಬಿಡು..'

..

'ಆಯ್ತು, ನಿನ್ನಿಷ್ಟ..'

ಮಂಚದ ಮೇಲೆ ಕೂತಿದ್ದ ಅಮ್ಮನ ಕೈ ಹಿಡಿದು ಕಣ್ಣಿಗೊತ್ತಿಕೊಂಡಿದ್ದ ರಾಮಚಂದ್ರ. ಹೀಗೆ ಒತ್ತಿಕೊಂಡ ಕೈ ಒದ್ದೊದ್ದೆಯಾಗಿ ವಿಚಲಿತರಾಗಿದ್ದರು ರಾಧಮ್ಮ.

'ಅಳ್ತಿದೀಯನೋ? ಏನಾಯ್ತೋ? ಎಲ್ಲಾನೂ ಹೊಟ್ಟೇಲಿಟ್ಕಂಡ್ರೆ ನಬೆದು